**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 184/2023**

ಪಿಡಬ್ಲ್ಯೂ: 01
ಸಿಡಬ್ಲ್ಯೂ: 01

ಹೆಸರು : ಚಂದ್ರಕಲಾ ಕುಬೇರಪ್ಪ ಕಂಬಳಿ
ವಯಸ್ಸು : 35 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸಸ್ಥಳ : ಗುಮ್ಮನಹಳ್ಳಿ

ದಿನಾಂಕ : 19.04.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.
**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

1 ವರ್ಷ 6 ತಿಂಗಳ ಹಿಂದೆ ಆರೋಪಿತನು ಚಾಸಾ-12 ರವರ ಮನೆಗೆ ಬರುತ್ತಿದ್ದನು. ನನ್ನ ಗಂಡ ಅದಕ್ಕೆ ಬೈದಾಡಿದರು. ಆರೋಪಿತನು ನಾನು ಮನೆಗೆ ಬರುತ್ತೇನೆ ಹೋಗುತ್ತೇನೆ ಅಂತಾ ಹೇಳಿದನು. ಆರೋಪಿತನು ನಿನ್ನ ಕೊಲೆ ಮಾಡುತ್ತೇನೆ ಅಂತಾ ಜೀವ ಬೆದರಿಕೆ ಹಾಕಿದನು. ಆರೋಪಿತನು ಚಾಸಾ-12 ರವರ ಜೊತೆಗೆ ಅಸಭ್ಯವಾಗಿ ವರ್ತಿಸುತ್ತಿದ್ದನು. ನನ್ನ ಗಂಡನಿಗೆ ಕೊಲೆ ಮಾಡುತ್ತೇನೆ ಅಂತಾ ಹೇಳಿದ್ದಾರಿಂದ ನನ್ನ ಗಂಡ ಮಾನಸಿಕವಾಗಿ ಹೊಂಡದ ಮೇಲೆ ಕುಳಿತುಕೊಂಡು ಮಾನಸಿಕ ಮಾಡಿಕೊಂಡು ಹೊಂಡದಲ್ಲಿ ಬಿದ್ದಿದ್ದನು. ನಂತರ ಅಗ್ನಿ ಶಾಮಕ ದಳದವರು ಸೇರಿ ಅವನನ್ನು ಮೇಲೆ ತೆಗೆದರು. ಆ ಸಮಯದಲ್ಲಿ ಹನುಮಂತಪ್ಪ ಕಂಬಳಿ ಮತ್ತು ಮಲ್ಲೇಶಪ್ಪ ಬಣಕಾರ ಇದ್ದರು. ಊರ ಮುಖಂಡರು ಸೇರಿ ಎಲ್ಲರೂ ದೂರನ್ನು ಸಲ್ಲಿಸಿದರು. ನಾನು ಹೇಳಿದ ಹಾಗೇ ಚಾಸಾ-09 ರವರು ದೂರನ್ನು ಬರೆದಿರುತ್ತಾರೆ. ದೂರನ್ನು ನಿಪಿ-01 ಎಂದು, ಸಾಕ್ಷಿ ಸಹಿಯನ್ನು ನಿಪಿ-01 ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಎಪಿಪಿಯವರ ವಿನಂತಿ ಮೇರೆಗೆ ಈ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ ಮೇರೆಗೆ ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲು : ಮಾನ್ಯ ಎಪಿಪಿ ಯವರಿಂದ :**

ಆರೋಪಿತನು ಚಾಸಾ-12 ರವರ ಮನೆಗೆ ಹೋಗುವುದು ಬರುವುದು ಮಾಡುತ್ತಿದ್ದನು ಅಂದರೆ ಸರಿ. ಈ ವಿಷಯ ನನ್ನ ಗಂಡ ಕೇಳಿದಾಗ ಆರೋಪಿತನು ಬೊಸಡಿ ಮಗ, ಮಿಂಡ್ರಿ ಮಗ ಅಂತಾ ಬೈದನು ಅಂದರೆ ಸರಿ. ಚಾಸಾ-09 ಮತ್ತು 11 ರವರು ಈ ವಿಷಯದ ಬಗ್ಗೆ ಮಾದೇವ ಗುಡಿ ಹತ್ತಿರ ಪಂಚಾಯತಿ ಮಾಡಿದರು ಅಂದರೆ ಸರಿ. ಪಂಚಾಯತಿ ಮಾಡಿ ಬುದ್ದಿ ವಾದ ಹೇಳಿದರು ಸಹ ಆರೋಪಿತನು ಚಾಸಾ-12 ರವರ ಮನೆಗೆ ಹೋಗಲು ಬಿಡಲಿಲ್ಲಾ ಎಂದರೆ ಸರಿ. ದಿಃ 04.05.2023 ರಂದು ನನ್ನ ಮಾವ ಮನೆ ಬಿಟ್ಟು ಹೋಗಿದ್ದರಿಂದ ದೂರನ್ನು ಸಲ್ಲಿಸಿದ್ದೇನೆ ಅಂದರೆ ಸರಿ. ನಮ್ಮ ಊರಿನಲ್ಲಿ 2-3 ದಿನದಲ್ಲಿ ಚುನಾವಣೆ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಆರೋಪಿತನು ಚಾಸಾ-12 ರವರ ಮನೆಗೆ ಹೋಗಿತ್ತಿದ್ದನು ಎಂದರೆ ಸರಿ. ಮತ್ತೇ ನನ್ನ ಗಂಡ ಪ್ರಶ್ನೆ ಮಾಡಿದನು ಎಂದರೆ ಸರಿ. ದಿನಾಂಕಃ 12.05.2023 ರಂದು ಮಧ್ಯಾಹ್ನ 1.30 ಗಂಟೆಗೆ ಚಾಸಾ-07 ಮತ್ತು 08 ರವರು ಅಲ್ಲಿ ನೋಡಿದರು ಎಂದರೆ ಸರಿ. ಸದರಿಯವರು ನನಗೆ ವಿಷಯ ತಿಳಿಸಿದರು ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ನನ್ನ ಗಂಡನಿಗೆ 4 ಜನ ಅಣ್ಣ ತಮ್ಮಂದಿರು ಅಂದರೆ ಸರಿ. ಕೃಷ್ಣಪ್ಪ, ಮಾಲತೇಶ, ಸುಬಾಸ, ಹನುಮಂತಪ್ಪ ಹಾಗೂ ನನ್ನ ಗಂಡ ಅಣ್ಣ ತಮ್ಮಂದಿರು ಅಂದರೆ ಸರಿ. ಇವರ ಪೈಕಿ ಹನುಮಂತಪ್ಪ ಮಾತ್ರ ಈ ಪ್ರಕರಣದಲ್ಲಿ ಸಾಕ್ಷಿಯಾಗಿರುತ್ತಾರೆ. ಊಳಿದ ಅಣ್ಣತಮ್ಮಂದಿರು ಮತ್ತು ಅವರ ಹೆಂಡತಿ

ಮಕ್ಕಳು ಈ ಪ್ರಕರಣದಲ್ಲಿ ಸಾಕ್ಷಿ ಇರುವುದಿಲ್ಲಾ ಅಂದರೆ ಸರಿ. ನಾನು ನನ್ನ ಗಂಡ, ಹನುಮಂತಪ್ಪ ಮತ್ತು ಆತನ ಹೆಂಡತಿ ಒಬ್ಬರಿಗೊಬ್ಬರು ಚೆನ್ನಾಗಿದ್ದೇವೆ ಅಂದರೆ ಸರಿ. ಕೃಷ್ಣಪ್ಪ ಮತ್ತು ಮಾಲತೇಶ ಹಾಗೂ ಅವರ ಪತ್ನಿಯರ ಜೊತೆ ನಾವು ಚೆನ್ನಾಗಿಲ್ಲಾ ಅಂದರೆ ಸರಿಯಲ್ಲಾ. ಆದ್ದರಿಂದ ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿ ಅಂತಾ ಮಾಡಿಲ್ಲಾ ಅಂದರೆ ಸರಿಯಲ್ಲಾ. ನಾನು ನನ್ನ ಗಂಡನ ಜೊತೆಗೆ ಪದೇ ಪದೇ ಜಗಳ ಮಾಡುತ್ತಿದ್ದೆ ಮತ್ತು ಹೊಂದಾಣಿ ಇರಲಿಲ್ಲಾ ಎಂದರೆ ಸರಿಯಲ್ಲಾ. ಚಾಸಾ-09 ರವರು ನಮ್ಮ ಊರಿನ ಚೇರಮನ್ ಇದ್ದರು ಎಂದರೆ ಸರಿ. ಆ ಸಮಯದಲ್ಲಿ ಆರೋಪಿತನಿಗೆ ಜನತಾ ಮನೆ ಮಂಜೂರಾಗಿತ್ತು ಎಂದರೆ ಸರಿ. ಆರೋಪಿತನು ಮನೆ ಹಣ ಕೊಡಲು ಚಾಸಾ-09 ರವರು ಲಂಚ ಕೇಳುತ್ತಿದ್ದಾ ಎಂದರೆ ಸರಿಯಲ್ಲಾ. ಚಾಸಾ-09 ರವರು ನನ್ನ ಸಂಬಂಧಿಕ ಅಂದರೆ ಸರಿ. ನನ್ನ ಗಂಡ ಮರಣ ಹೊಂದಿದು ನನ್ನ ಮೇಲೆ ಬರಬಾರದು ಅಂತಾ ಚಾಸಾ-09 ಮತ್ತು ನಾನು ಸೇರಿ ಆರೋಪಿತನ ಮೇಲೆ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತನು ಚಾಸಾ-12 ರವರ ಮನೆಗೆ ಬರುತ್ತಿದ್ದನು, ಚಾಸಾ-07 ರಿಂದ 09 ರವರು ಪಂಚಾಯತಿ ಮಾಡಿದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಚಾಸಾ-12 ರವರ ಮನೆಗೆ ಆರೋಪಿತನು ಎಂದಿಗೂ ಹೋಗಿಲ್ಲಾ ಮತ್ತು ತೊಂದರೆ ಕೊಟ್ಟಿಲ್ಲಾ ಅಂದರೆ ಸರಿಯಲ್ಲಾ. ನಾನು ಮತ್ತು ನಮ್ಮ ಸಂಬಂಧಿಕರು ಸೇರಿಕೊಂಡು ಆರೋಪಿತನ ಮೇಲೆ ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲಾ. ಆರೋಪಿತನು ನನ್ನ ಗಂಡನಿಗೆ ಬೊಸಡಿ ಮಗ, ಮಿಂಡ್ರಿ ಮಗ ಅಂತಾ ಬೈದು ಕೊಲೆ ಮಾಡುತ್ತೇನೆ ಅಂತಾ ಜೀವ ಬೆದರಿಕೆ ಹಾಕಿರುತ್ತಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಾನೇ ನನ್ನ ಗಂಡನಿಗೆ ತೊಂದರೆ ಕೊಟ್ಟಿದ್ದರಿಂದ ನನ್ನ ಗಂಡ ಜೀವ ಕಳೆದುಕೊಂಡಿದ್ದಾನೆ ಅಂದರೆ ಸರಿಯಲ್ಲಾ. ನನ್ನ ಗಂಡ ಸರಾಯಿ ಕುಡಿಯುತ್ತಿದ್ದನು. ನಾನು ತೊಂದರೆ ಕೊಡುತ್ತಿದ್ದರಿಂದ ನನ್ನ ಗಂಡ ಸರಾಯಿ

ಕುಡಿಯುತ್ತಿದ್ದನು ಎಂದರೆ ಸರಿಯಲ್ಲಾ. ನನ್ನ ಗಂಡ ಅದೆ ನಶೆಯಲ್ಲಿ ಹೋಗಿ ದಿಃ 12.05.2023 ರಂದು ಮರಣ ಹೊಂದಿದ್ದಾನೆ ಅಂದರೆ ಸರಿಯಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

Sd/-
ಜೆಎಂಎಫ್‌ಸಿ, ಬ್ಯಾಡಗಿ.